19

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2014–15ನೇ ಸಾಲಿನ ಕೃಷಿ ಇಲಾಖೆಯ ಚಾಲ್ತಿ ಯೋಜನೆ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ, ಯೋಜನೆಯಡಿಯಲ್ಲಿ "ಬೀಜೋತ್ಪಾದನೆ ಕೈಗೊಳ್ಳುವ ರೈತರಿಗೆ ಪ್ರೋತ್ಸಾಹಧನ" ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂ:ಕೃಇ/45/ಕೃಯೋಕಾ/2014, ದಿ: 11–04–2014.
2) ಕೃಷಿ ನಿರ್ದೇಶಕರ ಪತ್ರ ಸಂ: ಪಿಎಲ್ಎನ್/ತಾಂ–1/ಬೀ.ಪ್ರೋ/ ದ್ವಿದಳಧಾನ್ಯ/ 2014–15, ದಿನಾಂಕ:28–08–2014.

**ಪ್ರಸ್ತಾವನೆ**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2013–14ನೇ ಸಾಲಿನಲ್ಲಿ ಕೃಷಿ ಇಲಾಖೆ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ ಅನುಷ್ಠಾನಗೊಳಿಸಲಾಗುತ್ತಿದ್ದ ವಿವಿಧ ರಾಜ್ಯವಲಯ ಕೇಂದ್ರ ಪುರಸ್ಕೃತ ಹಾಗೂ ಕೇಂದ್ರವಲಯದ ಯೋಜನೆಗಳನ್ನು ಚಾಲ್ತಿ ಯೋಜನೆಗಳೆಂದು ಪರಿಗಣಿಸಿ, ಅವುಗಳಲ್ಲಿ 2013–14 ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಎಲ್ಲಾ ಘಟಕಗಳ ಸಮೇತ 2014–15ನೇ ಸಾಲಿನಲ್ಲಿ ಅಂದರೆ ದಿನಾಂಕ:01.04.2014 ರಿಂದ ದಿನಾಂಕ:31.03.2015ರವರೆಗೆ ಮುಂದುವರೆಸಲು ಸರ್ಕಾರವು ಮಂಜೂರಾತಿ ನೀಡಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ 2014–15ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 29ರಲ್ಲಿ "ಗುಣಮಟ್ಟದ ಬಿತ್ತನೆ ಬೀಜಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಅನುವಾಗುವಂತೆ ಸ್ವಬೀಜಾಭಿವೃದ್ಧಿ ಯೋಜನೆಯನ್ನು ಕೃಷಿ ಇಲಾಖೆಯು ವಿವಿಧ ಬೀಜೋತ್ಪಾದನಾ ನಿಗಮ/ಮಂಡಳಿ/ ಕೃಷಿ ವಿಶ್ವ ವಿದ್ಯಾನಿಲಯ/ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದ್ದು, ಮೂಲಭೂತ ಸೌಕರ್ಯಗಳಾದ ಬೀಜ ಸಂಸ್ಕರಣ ಗೋದಾಮುಗಳ ನಿರ್ಮಾಣ, ಒಕ್ಕಣೆ ಕಣ ನಿರ್ಮಾಣ, ಬೀಜ ಸಂಸ್ಕರಣೆಗಾಗಿ ಬೇಕಾದ ಉಪಕರಣಗಳನ್ನು ನೀಡುವುದರ ಜೊತೆಗೆ, ಬೀಜೋತ್ಪಾದನೆ ಕೈಗೊಳ್ಳುವ ರೈತರಿಗೆ ಬೀಜ ಪ್ರಮಾಣೀಕರಣ ಶುಲ್ಕದಲ್ಲಿ ರಿಯಾಯಿತಿ ಹಾಗೂ ಬೀಜ ಉತ್ಪಾದನೆಗೆ ಪ್ರೋತ್ಸಾಹಧನವನ್ನು ನೀಡಲು ಪ್ರಸ್ತಾಪಿಸಲಾಗಿದೆ" ಎಂದು ಘೋಷಿಸಲಾಗಿದ್ದು, ಮೇಲಿನ ಘಟಕಗಳಲ್ಲಿ "ಬೀಜೋತ್ಪಾದನೆ ಕೈಗೊಳ್ಳುವ ರೈತರಿಗೆ ಪ್ರೋತ್ಸಾಹಧನ" ಈ ಹೊಸ ಘಟಕಕ್ಕೆ ಮಂಜೂರಾತಿ ನೀಡುವ ಅವಶ್ಯಕತೆಯಿರುತ್ತದೆ. 2012–13 ರಲ್ಲಿ ಬೀಜೋತ್ಪಾದನೆ ಕೈಗೊಂಡು 2013–14ರಲ್ಲಿ ಪ್ರಮಾಣೀಕರಿಸಿದ ವಿವಿಧ ಬಿತ್ತನೆ ಬೀಜಗಳಿಗೆ ಪ್ರತಿ ಕ್ವಿಂಟಾಲ್‌ಗೆ ರೂ.1000/– ಪ್ರೋತ್ಸಾಹ ಧನವನ್ನು (ಬೀಜ ಉತ್ಪಾದನಾ ರೈತರಿಗೆ ರೂ.750/–ಹಾಗೂ ಬೀಜ ಉತ್ಪಾದನಾ ಸಂಸ್ಥೆಗೆ ರೂ.250/–) ನೀಡಬೇಕಾಗಿರುತ್ತದೆ. ಇದಕ್ಕೆ ರೂ.1901.50 ಲಕ್ಷಗಳ ಅನುದಾನದ ಅವಶ್ಯಕತೆಯಿದ್ದು (ದ್ವಿದಳಧಾನ್ಯ ಪ್ರೋತ್ಸಾಹಧನ ರೂ.1896.92 ಲಕ್ಷಗಳು ಮತ್ತು ಒರಟು ಧಾನ್ಯಗಳ ಪ್ರೋತ್ಸಾಹಧನ ರೂ.4.59 ಲಕ್ಷಗಳು) ಅದರಂತೆ ಸದರಿ ಹೆಚ್ಚುವರಿ ಘಟಕಕ್ಕೆ ಚಾಲ್ತಿ ಯೋಜನೆಯಾದ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ, ಲೆಕ್ಕ ಶೀರ್ಷಿಕೆ 2401–00–103–0–15 ಉ.ಶೀ.059 ಅಡಿ ಮಂಜೂರಾತಿ ನೀಡಿ ಹೆಚ್ಚುವರಿಯಾಗಿ ರೂ.1901.51 ಲಕ್ಷಗಳನ್ನು ಒದಗಿಸಿ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ದಿನಾಂಕ:16–10–2014 ರಂದು ನಡೆದ ಎಂ.ಎಂ.ಆರ್ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಬೀಜೋತ್ಪಾದನೆ ಕೈಗೊಳ್ಳುವ ರೈತರಿಗೆ ಪ್ರೋತ್ಸಾಹಧನ ಘಟಕವನ್ನು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ 2012ರವರೆಗೆ ನೀಡುತ್ತಿರುವುದರಿಂದ, ಪ್ರಸ್ತಾಪಿತ "ಬೀಜೋತ್ಪಾದನೆ ಕೈಗೊಳ್ಳುವ ರೈತರಿಗೆ ಪ್ರೋತ್ಸಾಹಧನ" ವನ್ನು ಹೊಸ ಘಟಕವಲ್ಲವೆಂದು ಪರಿಗಣಿಸಿ, 2014–15ನೇ ಸಾಲಿನ ಆಯವ್ಯಯದಲ್ಲಿ ಚಾಲ್ತಿಯೋಜನೆಯಾದ "ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಲೆಕ್ಕ ಶೀರ್ಷಿಕೆ: 2401–00–103–0–15"ಕ್ಕೆ ಕಲ್ಪಿಸಲಾಗಿರುವ ರೂ.55392.41ಲಕ್ಷ ಮೊತ್ತದಲ್ಲಿ ರೂ.1901.51 ಲಕ್ಷವನ್ನು ಬಳಸಲು ಅನುಮತಿ ನೀಡುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಿದ್ದು, ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/148/ಕೃಯೋಕಾ/2014, ಬೆಂಗಳೂರು, ದಿನಾಂಕ: 05–11–2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2012–13ನೇ ಸಾಲಿನಲ್ಲಿ ಬೀಜೋತ್ಪಾದನೆ ಕೈಗೊಂಡು 2013–14ರಲ್ಲಿ ಪ್ರಮಾಣೀಕರಿಸಿದ ವಿವಿಧ ಬಿತ್ತನೆ ಬೀಜಗಳನ್ನು ಬೀಜೋತ್ಪಾದನೆ ಕೈಗೊಂಡ

...2

ರೈತರಿಗೆ ಪ್ರೋತ್ಸಾಹಧನ ನೀಡುವ ಸಲುವಾಗಿ ರೂ.1901.51 ಲಕ್ಷ (ಹತ್ತೊಂಬತ್ತು ಕೋಟಿ ಒಂದು ಲಕ್ಷದ ಐವತ್ತೊಂದು ಸಾವಿರಗಳು) ಮೊತ್ತವನ್ನು 2014-15ನೇ ಸಾಲಿನ ಆಯವ್ಯಯದಲ್ಲಿ ಚಾಲ್ತಿ ಯೋಜನೆಯಾದ "ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಲೆಕ್ಕಶೀರ್ಷಿಕೆ:2401-00-103-0-15" ಕ್ಕೆ ಕಲ್ಪಿಸಲಾಗಿರುವ ರೂ.55,392.41 ಲಕ್ಷ ಮೊತ್ತದಲ್ಲಿ ಪಾವತಿಸಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಇವರಿಗೆ:
1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂ:5328, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂ:5328, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು
4. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
8. ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ವಿಭಾಗ.
9. ಸರ್ಕಾರದ ಉಪ ಕಾರ್ಯದರ್ಶಿ, ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಇಲಾಖೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, (ವೆಚ್ಚ-4) ಆರ್ಥಿಕ ಇಲಾಖೆ, ವಿಧಾನಸೌಧ.
11. ಶಾಖಾಧಿಕಾರಿಗಳು, ಕೃಷಿ ಯೋಜನೆ-ಎ & ಬಿ ಶಾಖೆ.
12. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಮಾಹಿತಿಗಾಗಿ ಪ್ರತಿ:-
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿ-1 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ.

ರವಾನಿಸಿದೆ
ದಿನಾಂಕ: 7/11/14